ಬದುಕು ಬದಲಿಸಿದ

# ಭಾವೇಶ್ ಭಾಟಿಯಾ

## ಅಂಧ ಉದ್ಯೋಗ ಜನಕನ ಸಾಹಸಗಾಥೆ

■ ನೇಮಿಚಂದ್ರ

ಕಲೆ: ಮನೋಹರ ಕೆ. ಆಚಾರ್ಯ

## ತೆರೆದಿದೆ ಸಾಧ್ಯತೆಯ ಜಗತ್ತು

ಅಧ್ಯಾಯ 1

ಆ ದಿನ ಶಾಲೆಯಿಂದ ಮನೆಗೆ ಬಂದದ್ದೇ ಚೀಲವನ್ನು ಒಗೆದು ಬಿಸಾಡಿ ಭಾವೇಶ್ ಜೋರಾಗಿ ಅಳತೊಡಗಿದ. ಆಗಿನ್ನೂ ಭಾವೇಶ್ ಒಂದನೇ ತರಗತಿಯಲ್ಲಿದ್ದ. ತಾಯಿ, ಆತನ ಕಾಲಿನ ಬೂಟುಗಳನ್ನು ತೆಗೆದು ಸಮಾಧಾನದಿಂದ ಕೇಳಿದಳು, 'ಏನಾಯಿತು ಮಗೂ? ಇವತ್ತು ಯಾರ ಜೊತೆಯಲ್ಲಾದರೂ ಜಗಳ ಆಡಿದೆಯಾ?'. ಭಾವೇಶ್ ಅಳುತ್ತಾ ಅಮ್ಮನಿಗೆ ಹೇಳಿದ – 'ನಾಳೆಯಿಂದ ನಾನು ಶಾಲೆಗೆ ಹೋಗುವುದಿಲ್ಲ. ಎಲ್ಲರೂ ನನ್ನನ್ನು ಕುರುಡ ಕುರುಡ ಎಂದು ಚುಡಾಯಿಸುತ್ತಾರೆ'. ಹೇಳುತ್ತಾ ಹೇಳುತ್ತಾ ದುಃಖ ಉಮ್ಮಳಿಸಿ ಬಂತು. ಇಡೀ ಬ್ರಹ್ಮಾಂಡದಲ್ಲಿ ತನಗಿಂತ ದುಃಖಿಗಳಿಲ್ಲ ಅನಿಸಿ ಅಮ್ಮನ ಮಡಿಲಲ್ಲಿ ತಲೆ ಇಟ್ಟು ಬಿಕ್ಕಿ ಬಿಕ್ಕಿ ಅತ್ತ.

ತಾಯಿ ತಮ್ಮ ಸೀರೆಯ ಸೆರಗಿನಿಂದ, ಭಾವೇಶನ ಕಣ್ಣುಗಳಿಂದ ಧಾರಾಕಾರವಾಗಿ ಸುರಿಯುತ್ತಿದ್ದ ಕಂಬನಿಯನ್ನು ಒರೆಸುತ್ತಾ ಹೇಳಿದಳು, 'ನೋಡು ಮರಿ, ನಮಗೆಲ್ಲ ಗೊತ್ತಿದೆ ಅಲ್ಲವೆ, ಹುಟ್ಟಿದಾಗಿನಿಂದ ನಿನ್ನ ಎರಡೂ ಕಣ್ಣುಗಳ ದೃಷ್ಟಿ ಬಹಳ ಕ್ಷೀಣವಾಗಿದೆ. ವೈದ್ಯರ ಪ್ರಕಾರ ನೀನು ಜೀವನದುದ್ದಕ್ಕೂ ಪುಸ್ತಕ ಅಥವಾ ಕಪ್ಪು ಹಲಗೆಯ ಮೇಲೆ ಬರೆದದ್ದನ್ನು ಓದಲಾರೆ. ನಿನಗಿರುವ ಕಣ್ಣಿನ ತೊಂದರೆ ಬಹಳ ಅಪರೂಪದ್ದು. ನಿನ್ನ ಎರಡೂ ಕಣ್ಣುಗಳ ಅಕ್ಷಿಪಟ ಕಲೆಗಳಿಂದ ತುಂಬಿ ಹೋಗಿದೆ. ಹಾಗಾಗಿಯೇ ನಿನ್ನ ಕಣ್ಣುಗಳಲ್ಲಿ ಕಾಣುವ ಚಿತ್ರಗಳ ಪ್ರತಿಬಿಂಬ ಮೂಡುವುದಿಲ್ಲ. ಇದರೊಡನೆ ನಿನ್ನ ಕಣ್ಣುಗಳಿಂದ ಮೆದುಳಿಗೆ ಹೋಗುವ ನರಗಳು ಮುದುಡುತ್ತಿವೆ. ಇದಕ್ಕೆ ಇಂದು ಇಡೀ ಪ್ರಪಂಚದಲ್ಲಿ ಯಾವ ಚಿಕಿತ್ಸೆಯೂ ಇಲ್ಲ ಮಗು'. ಇಷ್ಟೆಲ್ಲ ಮಗನ ಕಣ್ಣುಗಳ ಪರಿಸ್ಥಿತಿಯನ್ನು ಪೂರ್ಣರೂಪದಲ್ಲಿ ಆತನಿಗೆ ವಿವರಿಸಿ, ನಂತರ ಅಮ್ಮ ಹೇಳಿದ ಮಾತುಗಳು ಆತನ ಬದುಕಿನುದ್ದಕ್ಕೂ ದಾರಿದೀಪವಾದವು. 'ಭಾವೇಶ್ ಒಂದು ಮಾತನ್ನು ಜೀವನಪೂರ್ತಿ ನೆನಪಿನಲ್ಲಿ ಇಟ್ಟುಕೊ. ನಿಜ, ನೀನು ಈ ಪ್ರಪಂಚವನ್ನು ನೋಡಲಾರೆ. ಅದಕ್ಕಾಗಿ ಮನಸ್ಸು ಖಿನ್ನವಾಗುವುದು ಬೇಡ. ಜೀವನದಲ್ಲಿ ಅಂತಹದೇನಾದರೂ ಮಾಡಲು ಪ್ರಯತ್ನಿಸು, ಇಡೀ ಜಗತ್ತು ಎದ್ದು ಕುಳಿತು ನಿನ್ನನ್ನು ನೋಡಲು ಆರಂಭಿಸುತ್ತದೆ' ಎಂದು ಅಮ್ಮ ಹೇಳಿದ್ದಳು.

ಆ ತಾಯಿ ಮಗನ ಕೈಹಿಡಿದು ಶಾಲೆಗೆ ಎಳೆದೊಯ್ದು ಪ್ರಾಧ್ಯಾಪಕರಲ್ಲಿ ದೂರು ಹೇಳಲಿಲ್ಲ. ಉಳಿದ ಮಕ್ಕಳ ಅಮ್ಮಂದಿರಿಗೆ ಫಿರ್ಯಾದು ಕೊಂಡೊಯ್ಯಲಿಲ್ಲ. ಆ ಮಕ್ಕಳನ್ನು ಗದರಿ, ತರಾಟೆಗೆ ತೆಗೆದುಕೊಳ್ಳಲಿಲ್ಲ. ಬದುಕಿನ ಬಹು ದೊಡ್ಡ ಪಾಠವನ್ನು ಮಗನಿಗೆ ಮೃದುವಾಗಿ ಪ್ರೀತಿಯಿಂದ ತಿಳಿಯಹೇಳಿದ್ದಳು. ಸುತ್ತಲಿನ ಪ್ರತಿಕೂಲ ಪರಿಸ್ಥಿತಿಯನ್ನು ಈ ಕ್ಷಣ ಬದಲಾಯಿಸಲು ನಿನ್ನಿಂದ ಸಾಧ್ಯವಿಲ್ಲ. ಆದರೆ ನೀನು ಬದಲಾಗಬಲ್ಲೆ ಈ ಕ್ಷಣವೇ. ಗಟ್ಟಿಯಾಗಬಲ್ಲೆ. ಇತರರ ವಿವೇಚನೆ ಇಲ್ಲದ, ಸೂಕ್ಷ್ಮತೆ ಅರಿಯದ ಮಾತುಗಳು ನಿನ್ನ ಹಾದಿಯಲ್ಲಿ ಅಡ್ಡಗೋಡೆಯಾಗಿ ನಿಲ್ಲುವುದು ಬೇಡ. ಜಿಗಿದು ಬಾ ಈ ಬದಿಗೆ, ತೆರೆದಿದೆ ಸಾಧ್ಯತೆಯ ಜಗತ್ತು.

'ನಿನ್ನ ಅಂಧತ್ವವನ್ನು ಬದಲಾಯಿಸಲು ಆಗದು. ಅದನ್ನು ಒಪ್ಪಿಕೊಂಡು ಸ್ವೀಕರಿಸು' ಎನ್ನುವ ಅಮ್ಮನ ಮಾತುಗಳ ಒಳಮರ್ಮ ಆ ಚಿಕ್ಕ ವಯಸ್ಸಿಗೇ ಭಾವೇಶ್‌ಗೆ ಅರ್ಥವಾಗತೊಡಗಿತ್ತು. 'ಇತರರ ವರ್ತನೆ ನನ್ನ ನಿಯಂತ್ರಣದಲ್ಲಿಲ್ಲ' ಎನ್ನುವುದು ಕೂಡಾ ಮೆಲ್ಲನೆ ಅನುಭವಕ್ಕೆ ಬಂದಿತ್ತು. ಬೆಳೆದಂತೆ ಭಾವೇಶ್‌ಗೆ ಅರ್ಥವಾಗಲಿತ್ತು – ಇತರರ ವರ್ತನೆಗೆ ನಾನು ಹೇಗೆ ಪ್ರತಿಕ್ರಿಯಿಸಬೇಕು ಎಂಬುದು ಖಂಡಿತಾ ನನ್ನ ಕೈಯಲ್ಲಿದೆ. ಬದುಕಿನ ಅಪೂರ್ವ ಪಾಠಗಳನ್ನು ಆ ತಾಯಿ ಭಾವೇಶ್‌ಗೆ ಮಗುವಿನ ಮಾತಿನಲ್ಲಿ, ತುಂಬು ಪ್ರೀತಿಯಿಂದ ಲಲ್ಲೆಗರೆದು ಕಲಿಸಿದ್ದಳು.

ಅಮ್ಮನ ಮಾತುಗಳು ಪುಟ್ಟ ಭಾವೇಶನ ಮೇಲೆ ಪರಿಣಾಮ ಬೀರಿದ್ದವು, ಪ್ರಜ್ಞೆಯ ಆಳಕ್ಕೆ ಇಳಿದಿದ್ದವು. ಅವರ ಜೀವನಕ್ಕೆ ಉದ್ದೇಶವನ್ನು, ಧ್ಯೇಯವನ್ನು ಅಮ್ಮ ನೀಡಿದ್ದಳು. ಪ್ರೀತಿಯ ತಾಯಿ ಕುರುಡು ಮಗನ ಮೇಲೆ ಅನುಕಂಪದ ಮಳೆ ಸುರಿಸಲಿಲ್ಲ. ಆತನಿಗೆ ಯಾವ ರಿಯಾಯಿತಿಯನ್ನೂ ನೀಡದೆ ಸಾಧಾರಣ ಹುಡುಗನಿಗೆ ಹೇಳುವ ಎಲ್ಲ ಕೆಲಸವನ್ನೂ ಅವನಿಂದ ಮಾಡಿಸುವಳು. ಈ ತಾಯಿ ಭಾವೇಶ್‌ಗೆ ಬಟ್ಟೆ ಒಗೆಯುವುದು, ಪಾತ್ರೆ ತೊಳೆಯುವುದು ಮಾತ್ರವಲ್ಲ, ಅಡುಗೆ ಮಾಡುವುದನ್ನು ಕೂಡಾ ಕಲಿಸಲಿದ್ದರು! ಮಗನನ್ನು ಸ್ವಾವಲಂಬನೆಯ ಹಾದಿಗೆ ತಯಾರು ಮಾಡಿದ ತಾಯಿ.

ಮಗನನ್ನು ಅಂಧರ ಶಾಲೆಗೆ, ವಿಶೇಷ ಮಕ್ಕಳಿಗೆಂದೇ ಬೇರೆ ಇರುತ್ತಿದ್ದ ಶಾಲೆಗಳಿಗೆ ಅಮ್ಮ ಕಳುಹಿಸಲಿಲ್ಲ. ಮಗನನ್ನು ಸಾಧಾರಣ ಶಾಲೆಗೆ ಕಳುಹಿಸಿದ್ದರು. ಮುಂದೆ ತಮ್ಮ ಮಗ ಇದೇ ಸಮಾಜದ 'ನಾರ್ಮಲ್' ವ್ಯಕ್ತಿಗಳ ನಡುವೆಯೇ ಬದುಕಬೇಕಿದೆ, ಇದೇ ಜಗತ್ತಿನೊಡನೆ ಬೆರೆಯಬೇಕಿದೆ ಎಂಬ ಅರಿವು ಅನುಕ್ಷಣ ಆಕೆಗಿತ್ತು. ಆತನನ್ನು ತಾನು ಸಮಾಜದ ನೂರು ಸವಾಲುಗಳಿಂದ ರಕ್ಷಿಸಿ ಮಡಿಲಲ್ಲಿ ಬಚ್ಚಿಟ್ಟುಕೊಳ್ಳಲು ಸಾಧ್ಯವಿಲ್ಲ. ತನ್ನ ಅಂಧತ್ವದೊಡನೆಯೂ ಎಲ್ಲರಂತೆ ಸಾಮಾನ್ಯ ಬದುಕನ್ನು ನಡೆಸಲು ಮಗನನ್ನು ಬಾಲ್ಯದಿಂದಲೇ ತಯಾರು ಮಾಡಲು ಬಯಸಿದ್ದಳು. ಅದೇನೂ ಸುಲಭವಿರಲಿಲ್ಲ. ಭಾವೇಶನ ಸಮಸ್ಯೆಯನ್ನು ಅರ್ಥ ಮಾಡಿಕೊಳ್ಳದ ಸಹಪಾಠಿಗಳು, ಪ್ರಾಧ್ಯಾಪಕರು ಎಲ್ಲರ ನಡುವೆ ಭಾವೇಶ್‌ಗೆ ದಿನ ದಿನದ ಹೋರಾಟವಿತ್ತು. ಕಣ್ಣಿರುವವರ ಶಾಲೆಯಲ್ಲಿ ಆಟ–ಪಾಠ ಎಲ್ಲದರಲ್ಲೂ ಭಾವೇಶ್‌ನನ್ನು ಬದಿಗೆ ಸರಿಸಿ ನಿಲ್ಲಿಸಿದ್ದರು.

ಭಾವೇಶ್ ಕಣ್ಣೀರನ್ನು ಒರೆಸಿಕೊಂಡು ಅಮ್ಮ ಹೇಳಿದ್ದನ್ನು ಮನಸ್ಸಿಟ್ಟು ಕೇಳಿದರು. ಮಗನನ್ನು ಸಂತೈಸುತ್ತಾ, ಅಮ್ಮ ಮುಂದುವರೆಸಿ, ಪರಿಸ್ಥಿತಿಯನ್ನು ಎದುರಿಸುವ ಉಪಾಯವನ್ನೂ ಹೇಳಿಕೊಟ್ಟರು. 'ಇಂದು ನಿನ್ನನ್ನು ಕುರುಡ ಎಂದು ಚುಡಾಯಿಸುವ ಮಕ್ಕಳು ನಿನ್ನದೇ ವಯಸ್ಸಿನವರು. ಅವರಿಗೆ ಯಾವುದು ಸರಿ ಯಾವುದು ತಪ್ಪು